**ದಿನಾಂಕ 24-7-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಬಿ ಎಸ್ ವಕೀಲರಿಂದಃ**

ದಿನಾಂಕ 10-6-2016 ರಂದು ಸಂಜೆ 6-45 ಗಂಟೆಗೆ ಅನಾಮದೇಯ ಫೋನ್ ಕರೆ ಬಂದಿದ್ದು, ನಾನು ಅಕ್ರ ಸಂಖ್ಯೆ 44/2015-16 ರಲ್ಲಿ ಅಮಾನತುಪಡಿಸಿಕೊಂಡಿದ್ದ ಕಿರಾಲ್ ಬೋಗಿ ಜಾತಿಯ ಮರದ ದಿಮ್ಮಿಗಳನ್ನು ಕಳುವು ಮಾಡಿರವ ಬಗ್ಗೆ ಮಾಹಿತಿ ಬಂದಿರುತ್ತದೆ. ಈ ಕರೆ ಬಂದಾಗ ನಾನು ನನ್ನ ವಸತಿಗೃಹದಲ್ಲಿದ್ದೆನು. ನನ್ನ ವಸತಿ ಗೃಹದಿಂದ ಕಳುವಾದ ಜಾಗಕ್ಕೆ 4-5 ಕಿ ಮೀ ಅಂತರ ಇರುತ್ತದೆ. ಕರೆ ಬಂದ 10-15 ನಿಮಿಷಗಳಲ್ಲಿ ನಾನು ಸ್ಥಳಕ್ಕೆ ಒಬ್ಬನೇ ಹೋಗಿರುತ್ತೇನೆ. ದಿನಾಂಕ 11-6-2016 ರಾತ್ರಿ 8-15 ರಿಂದ 8-30 ಗಂಟೆಗೆ ಈ ಘಟನೆಗೆ ಸಂಬಂಧಿಸಿದಂತೆ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ಈ ಪ್ರಕರಣವು ಭಾ. ದಂ. ಸಂ. ಕಲಂ 379 ರಡಿ ದಾಖಲಿಸಬಹುದಾದ ಪ್ರಕರಣ ಎಂದರೆ ಸರಿ, ಈ ಪ್ರಕರಣ ಪೊಲೀಸರು ತನಿಖೆ ಮಾಡಬೇಕಾದ ಕಾರ್ಯವ್ಯಾಪ್ತಿಯ ಪ್ರಕರಣವಾಗಿದ್ದು ನಾವು ತನಿಖೆ ಕೈಗೊಳ್ಳಲು ಸಾಧ್ಯವಿಲ್ಲ ಎಂಬ ಜ್ಞಾನ ಇರುತ್ತದೆ. ಕಳುವಾದ ಮರದ ದಿಮ್ಮಿಗಳನ್ನು ಹುಡುಕಾಡಿದರೂ 24 ಗಂಟೆಗಳ ಒಳಗಾಗಿ ಸಿಗದಿದ್ದ ಕಾರಣ ಒಂದು ದಿನ ತಡವಾಗಿ ದೂರು ನೀಡಿರುತ್ತೇನೆ ಮತ್ತು ಈ ವಿಚಾರವನ್ನು ಪೊಲೀಸರಿಗೆ ತಿಳಿಸಿರುತ್ತೇನೆ. ನನಗೆ ಕಳುವಾದ ಬಗ್ಗೆ ಯಾವುದೇ ಮಾಹಿತಿ ಬಾರದೆ ಇದ್ದರೂ ಸಹ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಅರಣ್ಯ ತಕ್ಷೀರಿನಲ್ಲಿ ಅಮಾನತುಪಡಿಸಿಕೊಂಡ ಮರದ ದಿಮ್ಮಿಗಳನ್ನು ತಕ್ಷೀರು ಮುಕ್ತಾಯವಾದ ನಂತರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಆದೇಶದ ಮೇರೆಗೆ ಅವುಗಳನ್ನು ನಾಟಾ ಸಂಗ್ರಹಾಲಯಕ್ಕೆ ಸಾಗಾಟ ಮಾಡುತ್ತೇವೆ, ಈ ಪ್ರಕರಣದಲ್ಲಿ ತಕ್ಷೀರು ಮುಕ್ತಾಯವಾಗಿರದ ಕಾರಣ ಮರದ ದಿಮ್ಮಿಗಳನ್ನು ತಕ್ಷೀರು ಸ್ಥಳದಲ್ಲೆ ಬಿಟ್ಟಿದ್ದೆವು. ಅಕ್ರ ಸಂಖ್ಯೆ 44/2015-16 ರಲ್ಲಿ ಮರೋಡಿ ಗ್ರಾಮದ ಎಂ ಕೆ ಸುಹಾಸ್ ಬಲ್ಲಾಳ್ ಎಂಬುವವರು ಒಂಟಿ ರಹದಾರಿ ಕೋರಿ ಮರಗಳ ಕಡಿತಲೆ ಬಗ್ಗೆ ಹಾಗೂ ಸಾಗಾಟದ ಬಗ್ಗೆ ಅರ್ಜಿಯನ್ನು ನೀಡಿದ ಬಗ್ಗೆ ದಿನಾಂಕ 16-11-2015 ರಂದು ಅರ್ಜಿಗೆ ಸಂಬಂದ ಪಟ್ಟಂತೆ ನಾನು ಪಡಿಯಾರು ಮಲೆ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಸದರಿ ಅರ್ಜಿಯ ಬಗ್ಗೆ ನಾನು ಸ್ಥಳ ಪರಿಶೀಲನೆ ನಡೆಸಿರುತ್ತೇನೆ, ಈ ಸಮಯದಲ್ಲಿ ಸದರಿ ಕಡಿತಲೆ ಮಾಡಿದ ಮರಗಳು ಸರ್ಕಾರಿ ಜಾಗದಲ್ಲಿ ಕಡಿದ ಮರಗಳು ಎಂಬ ಬಗ್ಗೆ ಅನುಮಾನ ಉಂಟಾಗಿದ್ದು ಪ್ರಕರಣ ದಾಖಲು ಮಾಡಿರುತ್ತೇನೆ. ಅನುಮಾನದ ಮೇಲೆ ಅಕ್ರ ಸಂಖ್ಯೆ 44/2015-16 ರಲ್ಲಿ ಮರದ ದಿಮ್ಮಿಗಳನ್ನು ಸ್ವಾಧೀನಪಡಿಸಿಕೊಂಡಿರುತ್ತೇನೆ ಎಂದರೆ ಸರಿ. ಎಂ ಕೆ ಸುಹಾಸ್ ಬಲ್ಲಾಳ್ ರವರು ಒಂಟಿ ರಹದಾರಿ

ಪಡೆಯಲು ಅಗತ್ಯ ದಾಖಲೆಗಳಾದ ಪಹಣಿ ಮತ್ತು ನಕ್ಷೆಯನ್ನು ವೇಣೂರು ವಲಯ ಕಛೇರಿಗೆ ನೀಡಿರುತ್ತಾರೆ. ಸದರಿ ನಕ್ಷೆಯನ್ನು ಸರ್ವೇಯರ್ ನಂದೀಶ್ ರವರು ತಯಾರು ಮಾಡಿರುತ್ತಾರೆ. ನನಗೆ ಅನುಮಾನ ಬಂದ ಮೇರೆಗೆ ನಂದೀಶ್ ರವರನ್ನು ವಿಚಾರಣೆ ಮಾಡಿರುವುದಿಲ್ಲ. ಅಕ್ರ ಸಂಖ್ಯೆ 44/2015-16 ಇನ್ನೂ ಮುಕ್ತಾಯವಾಗಿರುವುದಿಲ್ಲ, ನಾನು ವರ್ಗಾವಣೆಯಾದ ಕಾರಣ ಪ್ರಸ್ತುತ ಯಾವ ಹಂತದಲ್ಲಿ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಅಕ್ರ ಸಂಖ್ಯೆ 44/2015-16 ರಲ್ಲಿ ಅರ್ಜಿ ನೀಡಿದ ಸುಹಾಸ್ ಬಲ್ಲಾಳ್ ರವರನ್ನು 1ನೇ ಆರೋಪಿಯನ್ನಾಗಿ ಮಾಡಿರುತ್ತೇವೆ. ನಕ್ಷೆಯನ್ನು ತಯಾರು ಮಾಡಿದ ನಂದೀಶ್ ರವರ ಮೇಲೆ ಪ್ರಕರಣ ದಾಖಲು ಮಾಡಲು ಯಾವುದೇ ಇರಲಿಲ್ಲ. ನಂದೀಶ್ ರವರ ಮೇಲೂ ಪ್ರಕರಣ ದಾಖಲು ಮಾಡಬೇಕಾಗಿತ್ತು ಆದರೆ ನಾನು ಪ್ರಕರಣ ದಾಖಲು ಮಾಡದೇ ಕರ್ತವ್ಯ ಲೋಪ ಎಸಗಿರುತ್ತೇನೆ ಎಂದರೆ ಸರಿಯಲ್ಲ.

ಅಕ್ರ ಸಂಖ್ಯೆ 44/2015-16 ರಲ್ಲಿ ವಶಪಡಿಸಿಕೊಂಡಿದ್ದ ಮರದ ದಿಮ್ಮಿಗಳಿಗೆ ಹಳದಿ ಬಣ್ಣದ ಆಯಿಲ್ ಚಾಕ್ ನಿಂದ 1 ರಿಂದ 24 ಎಂದು ಕ್ರಮ ಸಂಖ್ಯೆ ನೀಡಿ ಹಾಗೂ ಇಲಾಖಾ ಛಾಪಾ ಗುರುತು ಕೆ ಎನ್ ಎಫ್ ಡಿ/ಎಫ್ /24/ಆರ್ ನ್ನು ಮುದ್ರಿಸಿರುತ್ತೇವೆ. ನಿಪಿ-7 ರಿಂದ 11 ರಲ್ಲಿ ಕಂಡು ಬರುವ ಮರದ ದಿಮ್ಮಿಗಳ ಮೇಲೆ ಇಲಾಖಾ ಛಾಪು ಕಂಡು ಬರುವುದಿಲ್ಲ. ಈ ಪ್ರಸ್ತುತ ಪ್ರಕರಣದಲ್ಲಿ ನಂದೀಶ್ ರವರನ್ನು 2ನೇ ಆರೋಪಿಯಾಗಿ ಮಾಡಿದ್ದು ಅವರ ವಿರುದ್ಧ ಆರೋಪಿಗಳು ಇವರೆ ಎಂದು ನಾನು ದೂರು ನೀಡಿರುವುದಿಲ್ಲ. ಅಕ್ರ ಸಂಖ್ಯೆ 44/2015-16 ರ ತಕ್ಷೀರು ಸ್ಥಳದ ಸುತ್ತ ಮತ್ತು ಪಂಚಾಯತ್ ಕಟ್ಟಡ, ಹಾಲಿನ ಡೈರಿ ಮತ್ತು ಮನೆಗಳು ಇರುತ್ತವೆ ಮತ್ತು ಸಾರ್ವಜನಿಕರ ಓಡಾಟ ಇರುತ್ತದೆ ಎಂದರೆ ಸರಿ. ದೂರು ನೀಡಿದ ಮರುದಿನ ನಾವು ಅಕ್ರ ಸಂಖ್ಯೆ 44/2015-16 ಪ್ರಕರಣದ ತಕ್ಷೀರು ಸ್ಥಳಕ್ಕೆ ಸಂಜೆ 6-15 ರಿಂದ 7 ಗಂಟೆ ಅವಧಿಯ ಒಳಗೆ ಹೋಗಿರುತ್ತೇವೆ. ನಾವು ಠಾಣೆಯಿಂದ ಎ ಎಸ್ ಐ ಓಡಿಯಪ್ಪ ಗೌಡ ಮತ್ತು ಇನ್ನಿಬ್ಬರು ಪೊಲೀಸ್ ಸಿಬ್ಬಂಧಿಗಳು ಜೊತೆಯಾಗಿ ತಕ್ಷೀರು ಸ್ಥಳಕ್ಕೆ ಹೋಗಿರುತ್ತೇವೆ. ಸದರಿ ತಕ್ಷೀರು ಸ್ಥಳ ಪೊಲೀಸ್ ಠಾಣೆಯಿಂದ ಸುಮಾರು 15 ರಿಂದ 18 ಕಿ ಮಿ ದೂರದಲ್ಲಿರುತ್ತದೆ. ನಾವು ಸ್ಥಳಕ್ಕೆ ಹೋದಾಗ ಸಾರ್ವಜನಿಕರು ಇದ್ದರು ಮುಂದುವರೆದು ಚಾಸಾ-2 ರವರು ಇದ್ದರು ಎಂದು ನುಡಿಯುತ್ತಾರೆ. ಸದರಿ ಸ್ಥಳದಲ್ಲಿ ನಾವು 6 ರಿಂದ 7 ಗಂಟೆ ವರೆಗೆ ಇದ್ದೆವು. ನಾವುಗಳಲ್ಲದೇ ತಕ್ಷೀರು ಸ್ಥಳದಲ್ಲಿ ಅರಣ್ಯ ರಕ್ಷಕರಾದ ಈಶ್ವರ್ ಬಿ ಮತ್ತು ಮುಕ್ರಿ ರವರು ಸಹ ಇದ್ದರು. ನಾವು ಹೋದ ಸಂದರ್ಭದಲ್ಲಿ ಸರ್ವೆ ಅಧಿಕಾರಿಗಳು ಇರಲಿಲ್ಲ ಮತ್ತು ನಾವು ಸಹ ಕರೆದುಕೊಂಡು ಹೋಗಿರುವುದಿಲ್ಲ. ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ ಆದರೆ ಯಾರು ಮಾಡಿರುತ್ತಾರೆಂದು ನೆನಪಿರುವುದಿಲ್ಲ. ನಿಪಿ-4 ಮಹಜರನ್ನು ಸ್ಥಳದಲ್ಲಿ ಬರೆಯಲಾಗಿರುತ್ತದೆ. ನಿಪಿ-4

ಕ್ಕೆ ನಾನು ಸಹಿ ಮಾಡಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಒಟ್ಟು 3 ಸಹಿಗಳನ್ನು ಮಾಡಿರುತ್ತೇನೆ. ನಿಪಿ-4 ಕ್ಕೆ ಚಾಸಾ-2, 5, 8, ಈಶ್ವರ್ ಬಿ ಮತ್ತು ಮುಕ್ರಿಯವರು ಸಹಿ ಮಾಡಿರುತ್ತಾರೆ. ಅಕ್ರ ಸಂಖ್ಯೆ 44/2015-16 ರ ತಕ್ಷೀರು ಸ್ಥಳದ ಕಚ್ಚಾ ನಕ್ಷೆಯನ್ನು ಪೊಲೀಸರು ತಯಾರಿಸಿರುತ್ತಾರೆ. ತಕ್ಷೀರು ಸ್ಥಳ ಸರ್ಕಾರಿ ಸ್ಥಳ ಎಂದು ಖಾತರಿಯಾಗಿದ್ದು ಮಹಜರ್ ಸಮಯ ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿರುತ್ತೇನೆ. ಈ ಬಗ್ಗೆ ಪೊಲೀಸರು ಸರ್ವೆಯರ್ ರವರನ್ನು ವಿಚಾರಣೆ ಮಾಡಿರುವುದಿಲ್ಲ. ನಾನು ಹೇಳಿದ ಮೇರೆಗೆ ಸರ್ವೆ ನಂಬರ್ 263/2ಸಿ ಎಂದು ನಿಪಿ-4 ರಲ್ಲಿ ನಮೂದು ಮಾಡಿರುತ್ತಾರೆ ಎಂದರೆ ಸರಿ. ಪಂಚ ಸಾಕ್ಷಿದಾರರನ್ನು ಪೊಲೀಸರು ಬರಲು ಹೇಳಿರುತ್ತಾರೆ. ನಿಪಿ-4 ನ್ನು ಠಾಣೆಯಲ್ಲಿ ತಯಾರು ಮಾಡಿದ್ದು ತಕ್ಷೀರು ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರಸ್ತುತ ಪ್ರಕರಣದಲ್ಲಿ ದಿನಾಂಕ 12-6-2016 ರಂದು ಬೆಳಗ್ಗೆ 10-30 ಗಂಟೆಗೆ ತಕ್ಷೀರು ಸ್ಥಳಕ್ಕೆ ಭೇಟಿ ನೀಡಿದ್ದು ಒಬ್ಬರು ಎ ಎಸ್ ಐ ಮತ್ತು 4 ಜನ ಪೊಲೀಸ್ ಸಿಬ್ಬಂಧಿಗಳು, ಕಾರ್ಕಳದ ಅರಣ್ಯ ರಕ್ಷಕರು ಬಂದಿದ್ದರು. ತಕ್ಷೀರು ಸ್ಥಳವು ಚಾಸಾ-9 ಸಂತೋಷ್ ಕುಮಾರ್ ತಾವಾ ರವರರಿಗೆ ಸೇರಿದ ಸ್ಥಳವಾಗಿರುತ್ತದೆ. ಮರದ ದಿಮ್ಮಿಗಳು ಚಾಸಾ-9 ರವರ ಮನೆಯಲ್ಲಿದ್ದವು ಎಂದರೆ ಸರಿ, ಆದರೆ ಚಾಸಾ-9 ರವರ ಮೇಲೆ ಪ್ರಕರಣ ದಾಖಲು ಮಾಡಲು ನಾನು ಸೂಚಿಸಿರುವುದಿಲ್ಲ. ಪೊಲೀಸರು ಈ ಬಗ್ಗೆ ತನಿಖೆ ಮಾಡುತ್ತಿದ್ದರಿಂದ ನಾನು ಅವರ ತನಿಖೆಯಲ್ಲಿ ಪಾಲ್ಗೊಂಡಿರುವುದಿಲ್ಲ. ಚಾಸಾ-9 ರವರ ಮನೆಯ ಕಾಂಪೌಂಡ್ ಒಳಗಡೆ 3 ಮರದ ದಿಮ್ಮಿಗಳನ್ನು ವಶಪಡಿಸಿಕೊಂಡಿರುತ್ತಾರೆ. ಉಳಿದ 19 ಮರದ ದಿಮ್ಮಿಗಳು ಚಾಸಾ-9 ರವರಿಗೆ ಸೇರಿದ ಇನ್ನೊಂದು ಜಾಗದಲ್ಲಿ ಇಟ್ಟಿದ್ದನ್ನು ವಶಪಡಿಸಿಕೊಂಡಿರುತ್ತಾರೆ. 24 ದಿಮ್ಮಿಗಳ ಪೈಕಿ ಒಂದು ಮರದ ದಿಮ್ಮಿಯನ್ನು ಚಾಸಾ-9 ರವರ ಕಾಂಪೌಂಡ್ ಒಳಗಡೆ 3 ತುಂಡು ಮಾಡಿದ್ದರು. ಸದರಿ ಸ್ಥಳದಲ್ಲಿ 10-45 ರಿಂದ 12-15 ಗಂಟೆ ವರೆಗೆ ಇದ್ದೆವು. ನಾವು ಹೋದಾಗ ಚಾಸಾ-9 ರವರು ಮನೆಯಲ್ಲಿದ್ದರು. ಚಾಸಾ-9 ರವರ ಮನೆಯ ಅಕ್ಕಪಕ್ಕ ಬೇರೆ ಮನೆಗಳು ಇರುವುದಿಲ್ಲ, ಆದರೆ ಸ್ಥಳದಲ್ಲಿ ಸ್ಥಳೀಯ ನಿವಾಸಿ ಚಾಸಾ-5 ರವರು ಇದ್ದರು. ಸ್ಥಳಕ್ಕೆ ಹೋಗುವಾಗ ನಾನು ಯಾವುದೇ ಸಲಕರಣೆಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ, ಪೊಲೀಸರು ಎನು ತಂದಿದ್ದರು ಎಂದು ನೆನಪಿರುವುದಿಲ್ಲ. ಪೊಲೀಸರು ಬರವಣಿಗೆ ಮಾಡಿ ಸ್ವತ್ತು ಸ್ವಾಧೀನಪಡಿಸಿಕೊಂಡದ್ದನ್ನು ಹೊರತುಪಡಿಸಿ ಬೇರೆ ಏನೂ ಮಾಡಿರುವುದಿಲ್ಲ. 19 ದಿಮ್ಮಿಗಳು ಮತ್ತು ಟೆಂಪೋ ಇದ್ದ ಚಾಸಾ-9 ರವರ ಇನ್ನೊಂದು ಜಾಗದಲ್ಲಿ ಸಹ ಮಹಜರ್ ಬರವಣಿಗೆ ಮಾಡಿ ಸ್ವತ್ತುಗಳನ್ನು ಅಮಾನತುಪಡಿಸಿಕೊಂಡಿರುವುದನ್ನು ಹೊರತುಪಡಿಸಿ ಬೇರೆನು ಮಾಡಿರುವುದಿಲ್ಲ.

ಚಾಸಾ-5, 8 ಮತ್ತು ಪೊಲೀಸರು ಮಹಜರ್ ಸಮಯ ಇದ್ದು ನಿಪಿ-2 ಮತ್ತು 3 ಕ್ಕೆ ಸಹಿ ಮಾಡಿರುತ್ತೇವೆ. ನಿಪಿ-2 ಮತ್ತು 3 ನ್ನು ಠಾಣೆಯಲ್ಲಿ ತಯಾರು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

ಎರಡು ಮರದ ದಿಮ್ಮಿಗಳು ಟೆಂಪೋ ಒಳಗಡೆ ಇದ್ದು ಉಳಿದವು ಟೆಂಪೋದಿಂದ ಸುಮಾರು 20 ರಿಂದ 30 ಮೀಟರ್ ದೂರದಲ್ಲಿ ನೆಲದ ಮೇಲೆ ಇದ್ದವು. ಚಾಸಾ-9 ರವರ ಮನೆಯಿಂದ 15 ಮೀಟರ್ ದೂರದಲ್ಲಿ 3 ದಿಮ್ಮಿಗಳು ಕಾಂಪೌಂಡ್ ಒಳಗಡೆ ಇದ್ದವು. ನಾನು ಹೇಳಿದಂತೆ ಮರದ ದಿಮ್ಮಿಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅಕ್ರ ಸಂಖ್ಯೆ44/2015-16 ರಲ್ಲಿ ಪ್ರಭಾವಕ್ಕೆ ಒಳಗಾಗಿ ಸರಿಯಾಗಿ ತನಿಖೆ ಮಾಡದೆ ಪ್ರಕರಣವನ್ನು ಮುಚ್ಚಿಹಾಕಲು ಪ್ರಯತ್ನಪಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ಕಾರಣದಿಂದ ಅಕ್ರ ಸಂಖ್ಯೆ 44/2015-16 ರ ಪ್ರಕರಣದಲ್ಲಿ ನಾನು ತಪ್ಪಿಸಿಕೊಳ್ಳುವ ಸಲುವಾಗಿ ಆರೋಪಿಯ ವಿರುದ್ಧ ಈ ಪ್ರಕರಣದಲ್ಲಿ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿ ಯಾವುದೇ ಮರಗಳನ್ನು ಸಾಗಾಟ ಮಾಡಿರುವುದಿಲ್ಲ ಮತ್ತು ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರು ನೀಡಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳು ಬೆಳ್ತಂಗಡಿ.

(ಸಾ. ಓ. ಹೇ. ಕೇ. ಸ. ಇ. ಎ. ಒ.)